ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 85-K**

**Code No. : 85-K**

**D**

**CCE PR**
**UNREVISED**

Question Paper Serial No. **41**

ಇಲ್ಲಿ ಕತ್ತರಿಸಿ

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 23. 09. 2020 ] [ Date : 23. 09. 2020

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

### *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**Tear here**

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. 'ಮೈಸೂರು ರಾಜ್ಯ' ಕರ್ನಾಟಕ ಎಂದು ಮರು ನಾಮಕರಣವಾದ ವರ್ಷ

   (A) 1973

   (B) 1963

   (C) 1953

   (D) 1956

2. ಸೋವಿಯತ್ ರಷ್ಯಾದ ಸಹಾಯದಿಂದ ಭಾರತದಲ್ಲಿ ಸ್ಥಾಪಿಸಲ್ಪಟ್ಟ ಕೈಗಾರಿಕೆ

   (A) ಸಕ್ಕರೆ

   (B) ರಾಸಾಯನಿಕ ಗೊಬ್ಬರ

   (C) ಕಾಗದ

   (D) ಕಬ್ಬಿಣ ಮತ್ತು ಉಕ್ಕು

3. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಜಾಗತಿಕ ಸಂಸತ್ತು ಎಂದು ಕರೆಯುತ್ತಾರೆ. ಏಕೆಂದರೆ ಇದು

   (A) ಮಾನವ ಹಕ್ಕುಗಳನ್ನು ಪ್ರೋತ್ಸಾಹಿಸುತ್ತದೆ

   (B) ವರ್ಣಭೇದ ನೀತಿಯ ವಿರುದ್ಧ ಹೋರಾಡುತ್ತದೆ

   (C) ವಿಶ್ವಸಂಸ್ಥೆಯ ಎಲ್ಲಾ ಸದಸ್ಯರನ್ನು ಒಳಗೊಂಡಿದೆ

   (D) ಹಿಂದುಳಿದ ದೇಶಗಳ ಹಿತಕ್ಕಾಗಿ ಶ್ರಮಿಸುತ್ತದೆ

4. ಅಸ್ಪೃಶ್ಯತೆಯ ಆಚರಣೆಯು ಕ್ರಮೇಣವಾಗಿ ಕಡಿಮೆಯಾಗುತ್ತಿದೆ. ಏಕೆಂದರೆ

(A) ಹೆಚ್ಚುತ್ತಿರುವ ಉದ್ಯೋಗಾವಕಾಶಗಳು

(B) ಹೆಚ್ಚುತ್ತಿರುವ ಸಾಕ್ಷರತೆ

(C) ಉತ್ತಮ ಆರೋಗ್ಯ ಸೌಲಭ್ಯಗಳು

(D) ಉತ್ತಮ ಸಾರಿಗೆ ವ್ಯವಸ್ಥೆ

5. ಉತ್ತರದ ಮೈದಾನವು ದಕ್ಷಿಣ ಭಾರತಕ್ಕಿಂತಲೂ ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ. ಏಕೆಂದರೆ,

(A) ಸಮತಟ್ಟಾದ ಪ್ರದೇಶವಾಗಿದೆ

(B) ಕಡಿಮೆ ಮಳೆಯ ಪ್ರಮಾಣ ಹೊಂದಿದೆ

(C) ಸಮುದ್ರದಿಂದ ದೂರದಲ್ಲಿದೆ

(D) ಮರುಭೂಮಿ ಮಣ್ಣಿನ ಪ್ರದೇಶ

6. ಕೃಷ್ಣಾನದಿಗೆ ಅಡ್ಡಲಾಗಿ ನಿರ್ಮಿಸಿರುವ ಆಲಮಟ್ಟಿ ಅಣೆಕಟ್ಟನ್ನು ಈ ಹೆಸರಿನಿಂದ ಕರೆಯಲಾಗಿದೆ

(A) ಜವಹರಲಾಲ್ ನೆಹರು

(B) ಮೊರಾರ್ಜಿ ದೇಸಾಯಿ

(C) ಚರಣ್ ಸಿಂಗ್

(D) ಲಾಲ್ ಬಹಾದ್ದೂರ್‌ಶಾಸ್ತ್ರಿ

7. ಸಂವಿಧಾನಕ್ಕೆ 'ಜಾತ್ಯತೀತ' ಮತ್ತು 'ಸಮಾಜವಾದಿ' ಎಂಬ ಅಂಶಗಳನ್ನು ಸೇರಿಸಿದ ತಿದ್ದುಪಡಿ

(A) 52

(B) 42

(C) 22

(D) 26

8. ಪರೋಕ್ಷ ತೆರಿಗೆಗೆ ಉದಾಹರಣೆ

(A) ವರಮಾನ ತೆರಿಗೆ

(B) ಸಂಪತ್ತಿನ ತೆರಿಗೆ

(C) ಕಂಪನಿ ತೆರಿಗೆ

(D) ಸೇವಾ ತೆರಿಗೆ

9. ಭವಿಷ್ಯದ ಅವಶ್ಯಕತೆಗಳಿಗಾಗಿ ಉಳಿತಾಯ ಮಾಡುವ ಉದ್ದೇಶಕ್ಕಾಗಿ ತೆರೆಯಬಹುದಾದ ಬ್ಯಾಂಕ್ ಖಾತೆ

(A) ಆವರ್ತ ಠೇವಣಿ ಖಾತೆ

(B) ಚಾಲ್ತಿ ಖಾತೆ

(C) ಉಳಿತಾಯ ಖಾತೆ

(D) ನಿಶ್ಚಿತ ಠೇವಣಿ ಖಾತೆ

10. ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು

(A) ಧೀರೂಭಾಯಿ ಅಂಬಾನಿ

(B) ಏಕ್ತಾ ಕಪೂರ್

(C) ಅಜೀಮ್ ಪ್ರೇಮ್‌ಜಿ

(D) ವರ್ಗೀಸ್ ಕುರಿಯನ್

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಇತಿಹಾಸಕಾರರು ಜನಸಾಮಾನ್ಯರ ಚರಿತ್ರೆಯನ್ನು ಹೇಗೆ ನಿರೂಪಿಸುತ್ತಾರೆ ?

12. ಪೇಶ್ವೆ ಎರಡನೇ ಬಾಜಿರಾಯನು ಸಹಾಯಕ ಸೈನ್ಯ ಪದ್ಧತಿಗೆ ಒಳಪಡುವಂತೆ ಮಾಡಿದ ಸಂಗತಿ ಏನು ?

13. ಹಿಟ್ಲರನು 'ಬೂದು ಅಂಗಿ' ದಳವನ್ನು ಏಕೆ ಸಂಘಟಿಸಿದನು ?

14. 'ಸರ್ವ ಶಿಕ್ಷಣ ಅಭಿಯಾನ'ದ ಉದ್ದೇಶವನ್ನು ಹೇಗೆ ಈಡೇರಿಸಬಹುದು ?

15. ವರದಕ್ಷಿಣೆ ಸಮಸ್ಯೆಯನ್ನು ಕಾನೂನು ಮೂಲಕವಲ್ಲದೆ ಹೇಗೆ ಹೋಗಲಾಡಿಸಬಹುದು ?

16. ಮುಂಬಯಿಯನ್ನು ಭಾರತದ 'ಮ್ಯಾಂಚೆಸ್ಟರ್' ಎಂದು ಏಕೆ ಕರೆಯುತ್ತಾರೆ ?

17. ಮಿಶ್ರ ಬೇಸಾಯ ಎಂದರೇನು ?

18. ವ್ಯವಸಾಯವು ಕೈಗಾರಿಕೆಗಳಿಗೆ ಹೇಗೆ ಸಹಾಯ ಮಾಡುತ್ತದೆ ?

19. ಒಂದು ದೇಶದ ಅಭಿವೃದ್ಧಿಯನ್ನು ರಾಷ್ಟ್ರೀಯ ಆದಾಯದಿಂದ ಅಳೆಯುವುದು ಸಮಂಜಸವಲ್ಲ. ಏಕೆ ?

20. ತಲಾವರಮಾನವನ್ನು ಹೇಗೆ ಲೆಕ್ಕ ಹಾಕಬಹುದು ?

21. ನಮ್ಮ ಸಂವಿಧಾನದ 24ನೇ ವಿಧಿಯು ಬಾಲಕಾರ್ಮಿಕತನದ ಬಗ್ಗೆ ಹೇಗೆ ಎಚ್ಚರಿಸಿದೆ ?

22. ನಮ್ಮ ಅಭ್ರಕದ ರಫ್ತು ಕಡಿಮೆಯಾಗಲು ಕಾರಣವೇನು ?

23. ಯುನಿಸೆಫ್ ಸಂಸ್ಥೆಯು ಏಕೆ ಸ್ಥಾಪನೆಗೊಂಡಿತು ?

24. ಉದ್ಯಮಿ ಎಂದರೆ ಯಾರು ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** $25 \times 2 = 50$

25. ಪ್ಲಾಸಿ ಕದನದ ಫಲಿತಾಂಶಗಳು ಯಾವುವು ?

26. ಮೂರನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಬ್ರಿಟಿಷರೊಡನೆ ಹೋರಾಡಲು ಟಿಪ್ಪುವು ಹೇಗೆ ಸಿದ್ಧತೆ ನಡೆಸಿದನು ?

27. ಜ್ಯೋತಿಬಾ ಫುಲೆಯವರ ಸುಧಾರಣೆಗಳನ್ನು ತಿಳಿಸಿ.

28. ರಷ್ಯಾದ ಕ್ರಾಂತಿಗೆ ಕಾರಣಗಳು ಯಾವುವು ?

***ಅಥವಾ***

ಪ್ರಥಮ ಮಹಾಯುದ್ಧಕ್ಕೆ ಕಾರಣಗಳು ಯಾವುವು ?

29. ಲಾಭ ಬಡುಕತನವನ್ನು ನಿಯಂತ್ರಿಸುವ ವಿಧಾನಗಳೇನು ?

30. ಕೈಗಾ ವಿರೋಧಿ ಚಳುವಳಿಯನ್ನು ಏಕೆ ನಡೆಸಲಾಯಿತು ?

31. ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆಯು ಏನನ್ನು ನಿಷೇಧಿಸುತ್ತದೆ ?

32. ಪರ್ಯಾಯ ಪ್ರಸ್ಥಭೂಮಿಯ ಆರ್ಥಿಕ ಪ್ರಾಮುಖ್ಯತೆಯ ಬಗ್ಗೆ ಬರೆಯಿರಿ.

33. ಮಣ್ಣಿನ ಸವೆತಕ್ಕೆ ಕಾರಣಗಳೇನು ?

34. ಅರಣ್ಯ ಸಂರಕ್ಷಣಾ ವಿಧಾನಗಳು ಯಾವುವು ?

35. ದೂರ ಸಂವೇದಿ ತಂತ್ರಜ್ಞಾನವು ಹಲವು ಉಪಯೋಗಗಳನ್ನು ಹೊಂದಿದೆ. ಹೇಗೆ ?

36. ಭೂಕುಸಿತದ ಪರಿಣಾಮಗಳೇನು ?

37. ಮಾನವ ವಲಸೆಯನ್ನು ಹೇಗೆ ನಿಯಂತ್ರಿಸಬಹುದು ?

38. ಪಂಚವಾರ್ಷಿಕ ಯೋಜನಗಳ ಸಾಧನೆಗಳೇನು ?

39. ಜಾಗತೀಕರಣವು ಪರಿಸರದ ಅವನತಿಗೆ ಹೇಗೆ ಕಾರಣವಾಗುತ್ತದೆ ?

40. ನಾವಿಕರಿಗೆ ನೌಕಾಯಾನದಲ್ಲಿ ಸಹಾಯಕವಾದ ವೈಜ್ಞಾನಿಕ ಉಪಕರಣಗಳನ್ನು ಹೆಸರಿಸಿ.

41. ರೆಗ್ಯುಲೇಟಿಂಗ್ ಶಾಸನದ ಮುಖ್ಯಾಂಶಗಳು ಯಾವುವು ?

42. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣವನ್ನು ವಿವರಿಸಿ.

43. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕೈಗೊಳ್ಳಬಹುದಾದ ಕ್ರಮಗಳು ಯಾವುವು ?

44. ನಿಶ್ಶಸ್ತ್ರೀಕರಣವು ಪ್ರಚಲಿತ ಜಗತ್ತಿನ ಅವಶ್ಯಕತೆ. ಏಕೆ ?

45. ಶ್ರಮ ವಿಭಜನೆಯ ಅನುಕೂಲತೆಗಳೇನು ?

46. ಭಾರತದ ವ್ಯವಸಾಯವನ್ನು 'ಮಾನ್ಸೂನ್‌ನೊಡನೆ ಆಡುವ ಜೂಜಾಟ' ಎಂದು ಏಕೆ ಕರೆಯಲಾಗಿದೆ ?

47. ಅಸಾಂಪ್ರದಾಯಿಕ ಶಕ್ತಿಮೂಲಗಳ ಬಳಕೆಯನ್ನು ಹೆಚ್ಚಿಸುವುದು ಏಕೆ ಅಗತ್ಯವಾಗಿದೆ ?

48. ಸದ್ಯದಲ್ಲಿ ಕೃಷಿವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವೇನು ?

49. ಸ್ವ–ಉದ್ಯೋಗವನ್ನು ಪ್ರಾರಂಭಿಸಲು ನೆರವಾಗುವ ಆರ್ಥಿಕ ಸಂಸ್ಥೆಗಳು ಯಾವುವು ?

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. ಭಾರತದ ಆರ್ಥಿಕ ಬದಲಾವಣೆಗಳು ಮೊದಲನೆಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದವು. ಹೇಗೆ ?

***ಅಥವಾ***

ಬ್ರಿಟಿಷರು ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತಂದರು. ಹೇಗೆ ?

51. ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳನ್ನು ವಿವರಿಸಿ.

***ಅಥವಾ***

ಭಾರತ ಮತ್ತು ಅಮೇರಿಕಾದ ದೇಶಗಳು ಪ್ರಜಾಪ್ರಭುತ್ವ ದೇಶಗಳಾಗಿದ್ದು, ಇವುಗಳ ಪರಸ್ಪರ ಸೌಹಾರ್ದತೆಯ ಬಗ್ಗೆ ವಿವರಿಸಿ.

52. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ವಿವರಿಸಿ.

***ಅಥವಾ***

ಅಸಂಘಟಿತ ಕೆಲಸಗಾರರ ಸಮಸ್ಯೆಗಳನ್ನು ವಿವರಿಸಿ.

53. ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ರಸ್ತೆ ಸಾರಿಗೆಯ ಪಾತ್ರವೇನು ?

***ಅಥವಾ***

ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು ?

54. ಮಹಿಳಾ ಸ್ವ–ಸಹಾಯ ಸಂಘಗಳು ಸ್ವಚ್ಛ ಮತ್ತು ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ಹೇಗೆ ನೆರವಾಗುತ್ತವೆ ?

***ಅಥವಾ***

ಸರ್ಕಾರವು ತೆರಿಗೆಯೇತರ ಆದಾಯವನ್ನು ಹೇಗೆ ಪಡೆಯುತ್ತದೆ ?

55. ಬ್ಯಾಂಕುಗಳ ಕಾರ್ಯಗಳನ್ನು ವಿವರಿಸಿ.

***ಅಥವಾ***

ವಿಮೆಯ ಪ್ರಾಮುಖ್ಯತೆಯನ್ನು ವಿವರಿಸಿ.

V. **ಈ ಕೆಳಗಿನ ಪ್ರಶ್ನೆಗೆ *ಎಂಟರಿಂದ ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** 4

56. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುಭಾಷ್ ಚಂದ್ರ ಬೋಸ್‌ರ ಪಾತ್ರವನ್ನು ವಿವರಿಸಿ.

VI. 57. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** $1 + 3 = 4$

a) $23\frac{1}{2}^{o}$ ಉತ್ತರ ಅಕ್ಷಾಂಶ

b) ಉತ್ತರದ ಮೈದಾನ

c) ಬಾಂಬೆ ಹೈ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ಭಾರತೀಯರ ಜನಜೀವನಕ್ಕೆ ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳೇನು ? 4